# ವಿವಿಧ ಪ್ರಾರ್ಥನೆಗಳು

## ಕೃತಜ್ಞತಾ ಪ್ರಾರ್ಥನೆ

ದಯಾಭರಿತ ಬಾಲಯೇಸುವೇ, ನಿಮ್ಮ ಮುಂದೆ ಮೊಣಕಾಲೂರಿ, ನನ್ನ ಮೇಲೆ ನೀವು ಸುರಿಸಿದ ಕೃಪಾವರಗಳಿಗಾಗಿ ಮನಃಪೂರ್ವಕವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. ನಿಮ್ಮ ಕರುಣೆಯನ್ನು ಯಾವಾಗಲೂ ಸ್ಮರಿಸಿಕೊಂಡು, ನೀವೇ ನನ್ನ ದೇವರು, ನೀವೇ ನನ್ನ ಸಹಾಯಕರು, ನೀವೇ ನನ್ನ ಆಶ್ರಯದಾತರು ಎಂದು ನಿವೇದಿಸುತ್ತೇನೆ. ನಿಮ್ಮ ದಯೆ ಹಾಗೂ ಅಪರಿಮಿತ ಕೊಡುಗೆಗಳನ್ನು ಎಲ್ಲೆಲ್ಲೂ ಸಾರುತ್ತೇನೆ. ನಿಮ್ಮ ಅಪಾರ ಪ್ರೀತಿ, ಪರಾಮರಿಕೆ ಸರ್ವರಿಗೂ ತಿಳಿಯುವಂತಾಗಲಿ. ನಿಮ್ಮ ಬಾಲ್ಯದ ಭಕ್ತಿ, ಮಾನವ ಕೋಟಿಯ ಹೃನ್ಮನಗಳಲ್ಲಿ ಆಳವಾಗಿ ಬೇರೂರಲಿ. ನಿಮ್ಮ ಸಹಾಯವನ್ನು ಪಡೆದವರೆಲ್ಲರೂ ನಿಮ್ಮ ಪವಿತ್ರ ಬಾಲ್ಯಕ್ಕೆ ಪ್ರಣಾಮಗಳನ್ನು ಸಲ್ಲಿಸಿ, ನಿಮ್ಮನ್ನು ಸದಾಕಾಲಕ್ಕೂ ಸ್ತುತಿಸಿ ಮಹಿಮೆಪಡಿಸಲಿ. ಆಮೆನ್.

## ಬಾಲಯೇಸುವಿಗೆ ನಮ್ಮ ಸಮರ್ಪಣೆ

ಪ್ರಿಯ ಬಾಲಯೇಸುವೇ, ನಾನು ನಿಮ್ಮನ್ನು ಆರಾಧಿಸುತ್ತೇನೆ. ನನ್ನ ಮೇಲಿನ ಪ್ರೀತಿಯ ಸಲುವಾಗಿ ಒಂದು ಮಗುವಾಗಿ ಜನಿಸಿದಿರಿ. ನಿಮ್ಮ ಉನ್ನತ ಈ ಪ್ರೀತಿಗಾಗಿ ನಿಮ್ಮನ್ನು ಸ್ತುತಿಸುತ್ತೇನೆ; ನಿಮ್ಮ ಪವಿತ್ರ ರಹಸ್ಯಗಳನ್ನು ಸನ್ಮಾನಿಸುತ್ತೇನೆ. ನಿಮ್ಮ ಪ್ರೀತಿಗೆ ಬದಲಾಗಿ ನಾನು ನನ್ನನ್ನೇ ಸಂಪೂರ್ಣವಾಗಿ ನಿಮಗೆ ಅರ್ಪಿಸುತ್ತೇನೆ. ನಿಮ್ಮ ಪವಿತ್ರ ಬಾಲ್ಯದ ಸದ್ಗುಣಗಳನ್ನು ನನಗೂ ದಯಪಾಲಿಸಬೇಕೆಂದು ವಿನಂತಿಸುತ್ತೇನೆ. ಪ್ರಿಯ ಯೇಸುವೇ, ದೀನತೆಯಿಂದ ನಿಮ್ಮ ಔದಾರ್ಯವನ್ನೂ, ಪ್ರೀತಿಯೆಂಬ ಮಾಧುರ್ಯವನ್ನೂ ನನಗೆ ದಯಪಾಲಿಸಿರಿ. ನಿಮ್ಮ ವಿನಯ ಹಾಗೂ ಸರಳ ಸ್ವಭಾವವನ್ನು ನಾನು ಅನುಕರಿಸುವಂತೆ ಮಾಡಿರಿ. ನಿಮ್ಮನ್ನು ಪ್ರೀತಿಯಿಂದ ಅನುಕರಿಸಿ ನಿಮ್ಮ ಮಹೋನ್ನತ ಸನ್ನಿಧಿಯನ್ನು ಸೇರುವಂತೆ ಮಾಡಿರಿ. ಆಮೆನ್

## ಕಷ್ಟದಲ್ಲಿರುವಾಗ ಹೇಳತಕ್ಕ ಪ್ರಾರ್ಥನೆ

ಪ್ರಿಯ ಯೇಸುವೇ, ಮಾನವನ ಹೃದಯದಲ್ಲಿ ನೆಲೆಸಿ ಅಪಾರ ಕೃಪಾವರಗಳನ್ನು ಅವನ ಮೇಲೆ ಸುರಿಸುವುದೇ ನಿಮಗೆ ಪರಮಾನಂದವಾಗಿದೆ. ನಿಮ್ಮಲ್ಲಿ ನಂಬಿಕೆಯಿಟ್ಟವರೆಲ್ಲರೂ ವಿಶೇಷ ವರಗಳನ್ನು ಪಡೆದಿದ್ದಾರೆ. ಅವರ ಪ್ರಾರ್ಥನೆಯ ಫಲವನ್ನು ಸವಿಯುತ್ತಿದ್ದಾರೆ. ನಿಮ್ಮ ಅದ್ಭುತಕರ ಪ್ರತಿಮೆಯ ಮುಂದೆ ಮೊಣಕಾಲೂರಿ, ಬಿಚ್ಚುಮನಸ್ಸಿನಿಂದ ನನ್ನ ಕೋರಿಕೆಗಳನ್ನು, ಆಶೆ-ಆಕಾಂಕ್ಷೆಗಳನ್ನು ನಿಮ್ಮ ಮುಂದೆ ಇಡುತ್ತೇನೆ. ವಿಶೇಷವಾಗಿ ಈ ವರಗಳನ್ನು ಕರುಣಿಸಬೇಕೆಂಬುದೇ ನನ್ನ ಇಚ್ಛೆಯಾಗಿದೆ. ನಿಮ್ಮ ಚಿತ್ತದ ಪ್ರಕಾರ ನನ್ನನ್ನು ನಡೆಸಿರಿ. ನಿಮ್ಮ ಪರಮಜ್ಞಾನ, ನಿಮ್ಮ ಅಪಾರ ಪ್ರೀತಿ ನನಗೆ ಒಳಿತನ್ನೇ ಕರುಣಿಸುವುದೆಂಬ ನಂಬಿಕೆ ನನಗಿದೆ. ಈ ಕಷ್ಟದಲ್ಲಿ ನನಗೆ ನೆರವಾಗಿದ್ದು ನನ್ನನ್ನು ಚೇತನಗೊಳಿಸಬೇಕೆಂದು ನಿಮ್ಮನ್ನು ದೈನ್ಯದಿಂದ ವಿನಂತಿಸುತ್ತೇನೆ.

## ಅಸ್ವಸ್ಥರಾದವರಿಗಾಗಿ ಪ್ರಾರ್ಥನೆ

ಕರುಣಾಭರಿತ ಯೇಸುಬಾಲರೇ, ವ್ಯಾಧಿಸ್ತರ ಮೇಲೆ ನೀವು ಕರುಣೆ ತೋರುತ್ತೀರೆಂದು ನಾನು ನಂಬಿದ್ದೇನೆ. ಇಹಲೋಕದಲ್ಲಿರುವಾಗ ನಿಮ್ಮ ಮಾಧುರ್ಯ ಸ್ಪರ್ಶದಿಂದ ಅಸಾಧ್ಯವೆನಿಸಿದ ಎಲ್ಲಾ ತರಹದ ರೋಗಗಳಿಂದ ಬಳಲುತ್ತಿದ್ದವರನ್ನು ಗುಣಪಡಿಸಿದಿರಿ. ವಿವೇಕ ನಗರಕ್ಕೆ ಬಂದು

ನಿಮ್ಮ ಅದ್ಭುತಕರ ಪ್ರತಿಮೆಯನ್ನು ಕಂಡು ಹಿಂತಿರುಗುವ ಸಾವಿರಾರು ಭಕ್ತಾದಿಗಳು ತೀವ್ರ ಯಾತನೆಯಿಂದಲೂ ಬಾಧೆಗಳಿಂದಲೂ ಬಿಡುಗಡೆ ಹೊಂದಿ ಸ್ವಸ್ಥರಾಗಿದ್ದಾರೆ. ಪಾಪಿಯಾದ ನನಗೆ ಈ ಬಾಧೆಯು ಪ್ರಾಪ್ತಿಯಾಗಿರುವುದು ನ್ಯಾಯವೇ ಸರಿ. ನಿಮ್ಮ ಸಹಾಯವನ್ನು ಕೇಳಲು ಯಾವ ಹಕ್ಕೂ ನನಗಿಲ್ಲ. ಆದರೆ ನಿಮ್ಮ ಪವಿತ್ರ ಬಾಲ್ಯದ ನಿಮಿತ್ತ ಕಡುಪಾಪಿಗಳಿಗೂ ಸಹ ನೀವು ಕರುಣಿಸಿದ ಸ್ವಸ್ಥತೆಯನ್ನು ಕಂಡಿರುವುದರಿಂದ ನೀವು ನನಗೆ ಖಂಡಿತವಾಗಿ ಕರುಣೆ ತೋರುವಿರೆಂದು ನಂಬುತ್ತೇನೆ.

ಓ ದಿವ್ಯ ವೈದ್ಯರಾದ ಯೇಸುವೇ, ನಾನು ಈ ಕಾಯಿಲೆಯಿಂದ ಗುಣಮುಖನಾಗಬೇಕೆಂದು ನಿಮಗೆ ಚಿತ್ತವಿದ್ದರೆ, ನಿಮ್ಮ ಅಮೃತ ಹಸ್ತವನ್ನು ಚಾಚಿ ನನಗೆ ಸಹಾಯ ಮಾಡಿರಿ. ನನ್ನ ಯಾತನೆಯನ್ನು ನೀಗಿಸಿ ಸಕಲ ರೋಗ-ರುಜಿನಗಳಿಂದ ನನ್ನನ್ನು ಬಿಡುಗಡೆ ಮಾಡಿರಿ.

ಆದರೆ, ನಿಮ್ಮ ಅಗಾಧ ಜ್ಞಾನದ ಸಲುವಾಗಿ ನಾನು ಈ ಕಾಯಿಲೆಯಿಂದ ಸಹಿಸಬೇಕೆಂದು ನಿಮ್ಮ ಚಿತ್ತವಾದರೆ ನನ್ನ ಆತ್ಮವನ್ನಾದರೂ ಕರುಣೆಯಿಂದ ಗುಣಪಡಿಸಿರಿ. ನನ್ನ ಬಾಧೆಗಳನ್ನು ಸಹನೆಯಿಂದ ತಾಳಿಕೊಳ್ಳಲು ನಿಮ್ಮ ಉಪಶಮನದ ಕಾಂತಿಯು ನನ್ನನ್ನು ಆದರಿಸಲಿ. ದೈಹಿಕ ಯಾತನೆಗಳೆಲ್ಲವೂ ಕ್ಷಣಿಕವಾದುದೆಂಬುದನ್ನು ನಾನು ಮನಗಾಣುವಂತಾಗಲಿ.

ಓ ದಯಾಮಯ ಯೇಸುಬಾಲರೇ, ನಿಮ್ಮ ಚಿತ್ರಕ್ಕೆ ಅನುಸಾರವಾಗಿ ಎಲ್ಲವನ್ನೂ ಶಾಂತಿಯಿಂದ ಸಹಿಸಿಕೊಳ್ಳಲು ಕೃಪೆ ನೀಡಿರಿ. ನನ್ನ ಅಲ್ಪ ಯಾತನೆಯಲ್ಲಿ ಘೋರ ಯಾತನೆಯನ್ನು ಸಹಿಸಿದ ನಿಮ್ಮನ್ನು ಹೋಲುವಂತೆ ಮಾಡಿರಿ. ನನಗೆ ನಿತ್ಯ ಜೀವನವು ದೊರಕುವವರೆಗೂ ಶಯನದಲ್ಲಿ ನಿಮ್ಮ ಪರಾಮರಿಕೆಯನ್ನು ನಾನು ಸ್ತುತಿಸುವಂತಾಗಲಿ. ಆಮೆನ್.

## ಸ್ಮರಿಸಿಕೊಳ್ಳಿ ಬಾಲಯೇಸುವೇ

ಪವಿತ್ರ ಬಾಲಯೇಸುವೇ, ನೀವು ಪರಮ ಪ್ರಸಾದದ ಭಕ್ತಿಯಾದ ಸಂತ ಮಾರ್ಗರೀತಮ್ಮಳಿಗೆ ಹೇಳಿದ ಮಾತುಗಳನ್ನು ಸ್ಮರಿಸಿಕೊಳ್ಳಿರಿ. ಜೀವನದ ಹೊರೆಯಿಂದ ಕುಗ್ಗಿ ಕಂಗಾಲಾಗಿರುವ ಮಾನವ ಕೋಟಿಗೆ "ಈ ಪವಿತ್ರ ಹೃದಯದಿಂದ ನಿಮಗೆ ಬೇಕಾದುದನ್ನು ಪಡೆಯಿರಿ. ನನ್ನ ಬಾಲ್ಯದ ಪುಣ್ಯಫಲಗಳ ನಿಮಿತ್ತ ನಿಮಗೆ ಯಾವುದೂ ನಿರಾಕರಿಸಲ್ಪಡುವುದಿಲ್ಲ" ಎಂಬ ಉಪಶಮನವನ್ನೀಯುವ ನಿಮ್ಮ ಅಭಯದ ವಚನವನ್ನು ಸ್ಮರಿಸಿಕೊಳ್ಳಿರಿ.

ಓ ಯೇಸುವೇ, ಪರಮ ಸತ್ಯವಾಗಿರುವ ನಿಮ್ಮಲ್ಲಿ ಪೂರ್ಣ ನಂಬಿಕೆಯನ್ನಿಟ್ಟು ನಿಮ್ಮ ಚಿಂತಾಜನಕ ಸ್ಥಿತಿಯನ್ನು ಕುರಿತು ಹೇಳಲು ನಿಮ್ಮ ಬಳಿಗೆ ಬಂದಿರುತ್ತೇನೆ. ನಿತ್ಯ ಆನಂದ ಪಡೆಯಲು ಯೋಗ್ಯರಾಗಲು ನಾವು ಪುಣ್ಯ ಮಾರ್ಗದಲ್ಲಿ ನಡೆಯುವಂತೆ ಮಾಡಿರಿ. ನಿಮ್ಮ ಮನುಷ್ಯಾವತಾರ ಮತ್ತು ಪವಿತ್ರ ಬಾಲ್ಯದ ನಿಮಿತ್ತ ನಮಗೆ ಅತೀ ಅವಶ್ಯವಾಗಿರುವ ಕೃಪಾವರಗಳನ್ನುಕರುಣಿಸಿರಿ

ನಾವು ಅಪನಂಬಿಕೆಪಟ್ಟು ಎಂದೂ ಆಶಾಭಂಗವಾಗುವಂತಿಲ್ಲ. ಏಕೆಂದರೆ ನಾವು ನಿಮ್ಮ ಕರಗಳಲ್ಲಿ ನಮ್ಮ ಸರ್ವಸ್ವವನ್ನೂ ಅರ್ಪಿಸುತ್ತೇವೆ. ಸರ್ವಶಕ್ತ ದೇವರೇ, ನೀವು ಮಾಡಿದ ವಾಗ್ದಾನದ ನಿಮಿತ್ತ ನಮ್ಮ ದೀನ ಕೋರಿಕೆಗಳನ್ನು ಆಲಿಸಿ ಅವುಗಳನ್ನು ನೆರವೇರಿಸಿಕೊಡಿರಿ. ಆಮೆನ್.